ಪಿ . ಡಬ್ಲ್ಯೂ 01.

ದಿನಾಂಕಃ 14-02-2019 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 1, 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಸಿ ಡಿ ವಕೀಲರಿಂದಃ

ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆಯ ಭಾಗ್ಯಮ್ಮ. ನನ್ನ ತಾಯಿ. ಎರಡನೆಯವರು ನನ್ನ ಚಿಕ್ಕಮ್ಮ ಸುಬ್ಬಮ್ಮ ಎಂದರೆ ಸರಿ. ನಾನು ನನ್ನ ತಾಯಿಗೆ ಒಬ್ಬಳೇ ಮಗಳು ಎಂದರೆ ಸರಿ. ಸುಬ್ಬಮ್ಮನವರಿಗೆ 5 ಜನ ಮಕ್ಕಳು ಎಂದರೆ ಸರಿ. ನಿಮ್ಮ ನಿಮ್ಮಗಳ ಆಸ್ತಿಗಳನ್ನು ಹಂಚಿಕೊಂಡು ನೀನು, ನಿನ್ನ ತಾಯಿ ಮತ್ತು ಸುಬ್ಬಮ್ಮ ಮತ್ತು ಅವರ ಮಕ್ಕಳು ಬೇರೆ ಬೇರೆಯಾಗಿ ಜಮೀನುಗಳನ್ನು ಹಂಚಿಕೊಂಡಿದ್ದೀರಿ ಎಂದರೆ ಸರಿ . ನಾನು ಹುಟ್ಟನಿಂದ ಇಲ್ಲಿಯವರೆಗೂ ನಿಮ್ಮ ತಾಯಿಯ ಜೊತೆಯಲ್ಲಿ ಇದ್ದೀರಿ ಎಂದರೆ ಸರಿಯಲ್ಲಾ.

ಪ್ರತಿವಾದಿಗಳ ಮನೆಯಲ್ಲಿ ವಾಸವಾಗಿರುವ ಬಗ್ಗೆ ದಾಖಲೆಗಳು ಇಲ್ಲಾ. ಆ ಸಂಬಂಧವಾಗಿ ಸರ್ಕಾರಿ ದಾಖಲೆಗಳು ಇದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈಗಲೂ ಸಹ ನಾನು ನನ್ನ ತಾಯಿಯ ಮನೆಯಲ್ಲಿ ಇದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗಂಡ ಬಿಟ್ಟಿದ್ದರಿಂದ ಬಾಡಿಗೆ ಮನೆಯಲ್ಲಿ ಇದ್ದೇನೆ ಎಂದಿದ್ದಾರೆ. ಸದರಿ ಬಾಡಿಗೆ ಮನೆಯು ಕುಳ್ಳಮ್ಮನವರಿಗೆ ಸೇರಿದ್ದಾಗಿದೆ. ಹುಟ್ಟಿದಾಗಿನಿಂದ ಇಲ್ಲಿಯವರೆಗೂ ನೀವು ನಿಮ್ಮ ತಾಯಿಯ ಮನೆಯಲ್ಲಿ ವಾಸವಾಗಿದ್ದೀರಿ ಎಂದರೆ ಸರಿಯಲ್ಲಾ. ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲಾ. ರಾಮಶೆಟ್ಟಿ ಮತ್ತು ಪಾರ್ವತಮ್ಮ ನವರು ಅವರವರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲಾ. ನಾನು 3 ನೇ ಪ್ರತಿವಾದಿಯನ್ನು ಮದುವೆಯಾಗಿದ್ದನ್ನು ಯಾರು ನೋಡಿರುವುದಿಲ್ಲ. ದಾವಾ ಆಸ್ತಿಗಳು ಪ್ರತಿವಾದಿಗಳ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲಾ. ಒಟ್ಟು ಕುಟುಂಬ ಸ್ವಾಧೀನತೆಯಲ್ಲಿ ಇವೆ ಎಂದರೆ ಸರಿಯಲ್ಲಾ. ನೀವು 3 ನೇ ಪ್ರತಿವಾದಿಯನ್ನು ಮದುವೆಯಾಗದಿದ್ದರೂ ಸಹ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಸರಿಯಲ್ಲಾ. ತಿಮ್ಮಮ್ಮ ಯಾರೆಂದು ನನಗೆ ಗೊತ್ತಿಲ್ಲಾ. ಸಣ್ಣತಿಮ್ಮಮ್ಮ ನವರು 2 ನೇ ಪ್ರತಿವಾದಿಯ ತಾಯಿಯಾಗಿದ್ದು, ಅವರು ತೀರಿಕೊಂಡಿದ್ದಾರೆ. ಸಣ್ಣತಿಮ್ಮಮ್ಮನವರು ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿಯಲ್ಲಾ. ಸಣ್ಣತಿಮ್ಮಮ್ಮನವರಿಗೆ

2 ನೇ ಪ್ರತಿವಾದಿ ಸಪೂರ್ಟ್ ಮಾಡುತ್ತಿದ್ದರು ಎಂದರೆ ಸರಿಯಲ್ಲಾ. ಅವರು ಎಲ್ಲಾ ಮ್ಕಳುಗಳ ಖರ್ಚು ವೆಚ್ಚಗಳನ್ನು ಮತ್ತು ಮದುವೆಯನ್ನು ಮಾಡಿದ್ದರು ಎಂದರೆ ಸರಿಯಲ್ಲಾ. ಆ ಸಂಬಂಧ ದಾವಾ ಐಟಂ ನಂ: 3 ರ ಸ್ವತ್ತನ್ನು ಅವರ ಕುಟುಂಬದ ದರ್ದಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ.

ನಿಮಗೂ ಮತ್ತು ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲಾ. ಆದ್ದರಿಂದ ನಿಮಗೆ ಯಾವುದೇ ರೀತಿಯಾದ ಹಕ್ಕು ಇಲ್ಲಾ ಎಂದರೆ ಸರಿಯಲ್ಲಾ. ನಿಮಗೆ ದಾವಾ ಸ್ವತ್ತಿನಲ್ಲಿ ಭಾಗ ಕೇಳಲು ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲಾ. ಪ್ರತಿವಾದಿಗೂ ಮತ್ತು ನಿಮಗೂ ದೂರದ ಸಂಬಂಧಿಕರು ಎಂದರೆ ಸರಿಯಲ್ಲಾ. ರಾಜಶೆಟ್ಟಿ ನನ್ನ ಸೋದರ ಮಾವ. ಆ ಸಂಬಂಧವನ್ನು ದುರುಪಯೋಗಪಡಿಸಿಕೊಂಡು ನಾನು 3 ನೇ ಪ್ರತಿವಾದಿಯನ್ನು ಮದುವೆಯಾಗಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ

ಸರಿಯಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.